**<u>ದಿಃ06.03.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ 2ನೇ ಎದುರುದಾರರ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದ ಃ</u>**

ನಾನು ಈ ಅರ್ಜಿಯ 2ನೇ ಎದುರುದಾರ ಸಂಸ್ಥೆಯ ಸಹಾಯಕ ವ್ಯವಸ್ಥಾಪಕನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಪ್ರಸ್ತಾಪಿಸಿರುವ ವಿಚಾರಗಳನ್ನು ನಾನೇ ಮಾಹಿತಿ ಕೊಟ್ಟು ಬರೆಸಿರುತ್ತೇನೆ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಒಕ್ಕಣೆಯನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸತ್ಯದಿಂದ ಕೂಡಿದೆ ಎಂದು ಮತ್ತು ಅದರಲ್ಲಿ ಇರುವ ಸಹಿ ನನ್ನದಾಗಿರುತ್ತದೆ.

ನನ್ನ ಮುಖ್ಯ ವಿಚಾರಣೆಯ ಪೂರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿದ್ದು ಅದನ್ನು ನೋಡಿ ಗುರುತಿಸಿರುತ್ತೇನೆ.

1. ಅಧಿಕಾರ ಪತ್ರ ನಿ.ಆರ್.1
2. ವಿಮಾ ಪಾಲಿಸಿ ನಿ.ಆರ್.2 ಎಂದು ಗುರುತಿಸಿದ್ದೇನೆ.

ಆದ್ದರಿಂದ ನಾನು ತಕರಾರಿನಲ್ಲಿ ಕೋರಿದಂತೆ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ.ಕೆ.ಎಸ್.ಆರ್ ವಕೀಲರಿಂದ ಃ**

ನಾನು ಅಪಘಾತ ಸಂಬಂಧ ಪೊಲೀಸ್ ದಾಖಲಾತಿಗಳನ್ನು ಪರಿಶೀಲಿಸಿದ್ದೇನೆ. ನಮ್ಮ ಸಂಸ್ಥೆಯಿಂದ ವಿಮೆಗೆ ಒಳಪಟ್ಟ ವಾಹನದ ಮಾಲೀಕನಿಂದ ಅಪಘಾತ ಸಂಬಂಧ ಮಾಹಿತಿ ಪಡೆದ್ದೇನೆ. ವಿಮೆಗೆ ಒಳಪಟ್ಟ ವಾಹನದ ಸಂಬಂಧ ದಾಖಲಾತಿಗಳನ್ನು 1ನೇ ಎದುರುದಾರ ನಮ್ಮ ಸಂಸ್ಥೆಗೆ ಹಾಜರು ಮಾಡಿದ್ದಾರೆ. ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳು ಸಕ್ಷಮವಾಗಿವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಸಂಸ್ಥೆ ಈ ಸಂಬಂಧ ಯಾವುದೇ ತಕರಾರು ಎತ್ತಿಲ್ಲ ಎನ್ನುತ್ತಾರೆ. 1ನೇ ಎದುರುದಾರ ತನ್ನ ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದು ಯಾವುದೇ ಬರವಣಿಗೆ ಮಾಡಿಕೊಟ್ಟಿಲ್ಲ. ಅಪಘಾತ ಪಡಿಸಿದ ವಾಹನ ಖಾಯಂ ನೋಂದಣಿ ಆಗದ ಹೊಸ ವಾಹನ ಎಂದರೆ ಸರಿ. ಈ ಅಪಘಾತ ಮೈಸೂರು ಮಡಿಕೇರಿ ಹೆದ್ದಾರಿಯಲ್ಲಿ ಸಂಭವಿಸಿದೆ ಎಂದರೆ ಸರಿ. ಅಪಘಾತವನ್ನು ನಾನು ಖುದ್ದು ನೋಡಿಲ್ಲ. ಅದಕ್ಕೆ ಸಂಬಂಧಿಸಿದ ಪೊಲೀಸ್ ದಾಖಲಾತಿಗಳನ್ನು ನಾನು ನೋಡಿದ್ದೇನೆ. ನಿಪಿ.4ರ ನಕಾಶೆಯಲ್ಲಿ ರಸ್ತೆ ಪಕ್ಕದಲ್ಲಿ ಇರುವ ಫುಟ್ ಬಾತ್ ನಲ್ಲಿ ರಕ್ತದ ಕಲೆ ಆಗಿರುವುದು ಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೃತ್ಯ ನಡೆದ ಸ್ಥಳ ರಸ್ತೆ ಮಧ್ಯಭಾಗದಲ್ಲಿ ಎಂದು ತೋರಿಸಲಾಗಿದೆ ಎನ್ನುತ್ತಾರೆ. ನಮ್ಮ ವಿಮಾ ಕಂಪನಿಯ ವತಿಯಿಂದ ಅಪಘಾತದ ಪ್ರತ್ಯೇಕ್ಷದರ್ಶಿಗಳನ್ನು ವಿಚಾರಣೆ ಮಾಡಲಿಲ್ಲ. ಸದರಿಯವರನ್ನು ವಿಚಾರಣೆ ಮಾಡಿ ಅಪಘಾತ ಹೇಗೆ ಸಂಭವಿಸಿದೆ ಎಂದು

ತಿಳಿದುಕೊಳ್ಳಲು ನನಗೇನೂ ತೊಂದರೆ ಇರಲಿಲ್ಲ. ಈ ಅಪಘಾತ ಪಾದಾಚಾರಿಗೆ ಡಿಕ್ಕಿಹೊಡಿಸಿದ್ದರಿಂದ ಸಂಭವಿಸಿದೆ ಎಂದರೆ ಸರಿ. ತನಿಖಾಧಿಕಾರಿ ಅಪಘಾತ ಸಂಬಂಧ ಪ್ರೈತ್ಯಕ್ಷದರ್ಶಿಗಳನ್ನು ವಿಚಾರಣೆ ಮಾಡಿ ಇತರ ದಾಖಲಾತಿಗಳನ್ನು ಕಲೆ ಹಾಕಿ ದೋಷಾರೋಪಣಾ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿ. ದೋಷಾರೋಪಣಾ ಪತ್ರದಲ್ಲಿ ಈ ಅಪಘಾತ ನಮ್ಮ ಸಂಸ್ಥೆಯಿಂದ ವಿಮೆಗೆ ಒಳಪಟ್ಟ ವಾಹನದ ಚಾಲಕನ ತಪ್ಪಿನಿಂದಾಗಿ ಸಂಭವಿಸಿದೆ ಎಂದರೆ ತೋರಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೃತನು ಸಹ ರಸ್ತೆ ದಾಟುವಾಗ ಎಚ್ಚರಿಕೆ ವಹಿಸದೇ ನಿರ್ಲಕ್ಷ ವಹಿಸಿದ್ದರಿಂದ ಈ ಅಪಘಾತ ಸಂಭವಿಸಿದೆ ಎನ್ನುತ್ತಾರೆ. ಅರ್ಜಿದಾರರಿಗೆ ಪರಿಹಾರ ಕೊಡಬೇಕಾದ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.